

(ಹಿಂದಿನ ಸಂಚಿಕೆಯಿಂದ)

'ಭರತನನ್ನು ರಾಮನಿಗೆ ದಾಸನನ್ನಾಗಿ ಮಾಡಬೇಡ. ದಯೆ ತೋರಿ ಕಾಡಿಗಾದರೂ ಕಳುಹಿಸು. ನಾನು ಅವನೊಡನೆ ಹೋಗಿ ಶುಶ್ರೂಷೆ ಮಾಡುತ್ತೇನೆ. ಇದು ನಾನು ನಿನ್ನಲ್ಲಿ ಕೇಳುವ ಭಿಕ್ಷೆ' ಎಂದು ಹೇಳಿ ಮಂಥರೆ ಹೊರಡಲು ಎದ್ದು ನಿಂತಳು. ಕೈಕೆ ಅವಳನ್ನು ಮುಳುಗುವಾತನು ಪ್ರಾಣರಕ್ಷಣೆಗೆ ಮೊಸಳೆಯನ್ನು ತಬ್ಬುವಂತೆ ಬಿಗಿದಪ್ಪಿದಳು. ಆಗ ಉತ್ಸಾಹ ಮರುಕಳಿಸಿದಂತೆ ಮಂಥರೆ ಹೇಳಿದಳು:

'ಮೇಲೇಳು, ಬರಿ ಅಳುವಿನಿಂದ ಏನೂ ಆಗುವುದಿಲ್ಲ. ಕಾರ್ಯ ಸಾಹಸಿಯಾಗು! ವೀರಸತಿಯಾದ ನೀನು ಮರೆತರೂ ನಾನು ನೆನಪಿಸುವೆ. ಮಗಳೆ, ನೀನು ನನಗೆ ಹೇಳಿದ್ದ ರಹಸ್ಯವನ್ನು ನೆನಪು ಮಾಡಿಕೊ. ದಶರಥನು ನಿನ್ನ ಚೆಲುವಿಗೆ ಸೋತು, ಸೌಂದರ್ಯದಾಸನಾಗಿ ಮದುವೆಯಾಗುವಂತೆ ಮೊದಲು ನಿನಗಿತ್ತ ಭಾಷೆಯನ್ನು ನೆನಪು ಮಾಡಿಕೊ.'

ಅವಳ ಆ ನುಡಿಗೆ ಕೈಕೆ ಹಿಗ್ಗಿದಳು. ವಕ್ರಗಾತ್ರೆಯನ್ನು ತಬ್ಬಿ ನುಡಿದಳು.

'ಓ ನನ್ನ ಭಾಗ್ಯದೇವತೆಯೆ, ಕಣ್ಣು ಕಾಣಿಸದ ನನಗೆ ದಾರಿ ತೋರಿಸಿದೆ. ನೀನು ನನ್ನನ್ನು ಮರಳಿ ಹಡೆದ ತಾಯಿ. ಈ ಪರದೇಸಿಯನ್ನು ನೀನು ಕೈಬಿಟ್ಟರೆ ಇನ್ನಾರು ಗತಿ? ಇದುವರೆಗೆ ನಾನು ಕಣ್ಣಿದ್ದು ಕುರುಡಿಯಾಗಿದ್ದೆ. ನೋಡು, ನನ್ನ ಕಡೆಗೆ ನೋಡು. ನೀನು ಇಂದು ನನಗೆ ಸುಂದರ ರೂಪಿಣಿಯಾಗಿ ಕಾಣುತ್ತಿರುವೆ. ಲೋಕದಲ್ಲಿ ಹೊರ ಮೈಯನ್ನಷ್ಟೆ ನೋಡುತ್ತ ಸೊಬಗನ್ನು ಕಾಣುವವರು ಬರಿಯ ಬೆಪ್ಪರಲ್ಲವೆ? ನಿಜವಾದ ಸೌಂದರ್ಯ ಆತ್ಮಕ್ಕೆ ಸೇರಿದುದು. ಗೂನಿಯಾಗಿದ್ದರೂ ನಿನಗಿಂತ ಸುಂದರಿಯರು ಇರುವರೆ? ಗಂಧದ ಕೊರಡು ಡೊಂಕಾದರೆ ಗಂಧಕ್ಕೆ ಕೊರತೆಯೆ?'

ಎಂದು ಸರ್ವ ಸೌಂದರ್ಯನಿಧಿಯಾದ ಕೈಕೆ ಕುರೂಪತಾ ಮುದ್ರೆಯನ್ನು ಮುದ್ದಾಡಿದಳು.

ಮೀನುಗಾರನು ಮೀನು ಕಚ್ಚಿತೆಂದು ಗೊತ್ತಾಗಲು ಗಾಳದ ನೆಣವನ್ನು ಒಂದಿನಿತು ಸಡಿಲ ಬಿಡುವಂತೆ – ಕುಬ್ಜೆ ಮತ್ತೆ ನುಡಿದಳು:

'ಚಂದ್ರವದನೆಯೆ, ನಿರ್ಣಯಕ್ಕೆ ಬರುವ ಮೊದಲು ಮತ್ತೊಮ್ಮೆ ಆಲೋಚಿಸು. ದುಡುಕ ಬೇಡ. ತಲೆಕೆಟ್ಟ ಗೂನಿಯಾದ ನನ್ನ ಮಾತಿಗೆ ಕಟ್ಟು ಬಿದ್ದು, ತರುವಾಯ ದೂರಬೇಡ. ನಿನ್ನ ಮತ್ತು ಭರತನ ಮೇಲಿನ ಮಮತೆ ಮತ್ತು ಪ್ರೀತಿಯಿಂದ ಹೀಗೆ ಹೇಳುತ್ತಿರುವೆನೇ ಹೊರತು ರಾಮನ ಮೇಲಿನ ದ್ವೇಷದಿಂದಲ್ಲ. ರಾಮ ಚೆನ್ನಾಗಿರಲಿ!

'ಚೆನ್ನಾಗಿ ಕೇಳಿಸಿಕೊ. ರಾಮನು ಕೋಸಲದಲ್ಲಿರುವವರೆಗೆ ಭರತನಿಗೆ ಈ ನೆಲ ಸಿಗುವುದಿಲ್ಲ. ಚಕ್ರಾಧಿಪತಿಯನ್ನು ದಶರಥನಿಂದ ಪಡೆದು ಭರತನಿಗೆ ಕೊಟ್ಟರೂ, ರಾಮನ ಪಕ್ಷದವರು ಸಂಚು ಮಾಡಿ ಬಾಲರ್ಷಿ ಭರತನನ್ನು ಹಳ್ಳಕ್ಕೆ ಕೆಡವುತ್ತಾರೆ. ಆದುದರಿಂದ ಕೌಸಲ್ಯೆಯ ಮಗನಿಗೆ ಹದಿನಾಲ್ಕು ವರ್ಷ ಅರಣ್ಯಯಾತ್ರೆ ಮತ್ತು ನಿನ್ನ ಮಗನಿಗೆ ರಾಜ್ಯ ಪದವಿ ಒಟ್ಟಿಗೆ ದೊರೆಯುವಂತೆ ಪ್ರಯತ್ನಿಸಬೇಕು. ಅಗೋ ವಾದ್ಯಗಳ ಮಂಗಳರವವನ್ನು ಕೇಳು!'

ಗಾಳವನ್ನು ಸಡಿಸಿದಷ್ಟು ಕೊಂಡಿಯೊಳಗಿನ ಎರೆಯನ್ನು ನುಂಗಲು ಮೀನು ಹವಣಿಸುವಂತೆ ಕೈಕೆಯು ಮುದಿ ದಾಸಿಯನ್ನು ಬಿಗಿದಪ್ಪಿಕೊಂಡು ಹೀಗೆ ಹೇಳಿದಳು:

'ಕೆಳದಿಯೆ, ನಾನು ಇದುವರೆಗೆ ನಿನ್ನ ಮಹಿಮೆಯನ್ನು ತಿಳಿಯದ ಮೂರ್ಖಳಾಗಿದ್ದೆ. ಈಗ ನೀನೆ ಮುಂದಿನ ದಾರಿಯನ್ನು ತೋರಿಸು.'

'ಮರುಳೆ, ಸೌಂದರ್ಯದಿಂದ ಸಮಸ್ತ ಲೋಕವನ್ನು ಗೆಲ್ಲಬಹುದು. ಅದರ ಎದುರು ಕೋಸಲವು ಒಂದು ತೃಣವಲ್ಲವೆ? ಏಳು, ತಡ ಮಾಡಬೇಡ! ತೊರೆ ಇಳಿದ ಮೇಲೆ ಸೇತುವೆ ಕಟ್ಟಿ ಪ್ರಯೋಜನವೇನು? ಕೋಪಗೃಹವನ್ನು ಸೇರು. ನಿನ್ನ ಇಷ್ಟ ನೆರವೇರುವವರೆಗೆ ಹೊರಗೆ ಬರಬೇಡ.'

****

ದಶರಥನು ರಾಮನಿಗೆ ಅಭಿಷೇಕವನ್ನು ನಿಶ್ಚಯಿಸಿ ಅದನ್ನು ತಿಳಿಸಲು ಕೈಕೆಯ ಅಂತಃಪುರಕ್ಕೆ ಹೋಗುತ್ತಾನೆ. ಅವಳು ಅಲ್ಲಿರದೆ ಕೋಪಗೃಹದಲ್ಲಿರಲು ಅಲ್ಲಿಗೆ ಹೋಗಿ ಅವಳ ದುಸ್ಥಿತಿಯನ್ನು